ಕೆಲಸ ಮಾಡುತ್ತಿದ್ದೇನೆ. ಅಲ್ಲೆಲ್ಲ 2,700 ವಿದ್ಯಾರ್ಥಿಗಳಿದ್ದಾರೆ. ಅವರಿಗೆ ನೇತ್ರದಾನ ಹಾಗೂ ಮಳೆ ನೀರು ಸಂಗ್ರಹದ ಬಗ್ಗೆ ಅರಿವು ಮೂಡಿಸಿದ್ದೇವೆ. 20 ಸಾವಿರ ವಿದ್ಯಾರ್ಥಿಗಳು ನೇತ್ರದಾನದ ಸ್ವಯಂಸೇವಕರಾಗಿದ್ದಾರೆ. ಹಾಲಿ ಹಾಗೂ ಹಳೆಯ ವಿದ್ಯಾರ್ಥಿಗಳಿರುವ ಸುತ್ತಮುತ್ತ ಸಾವಿನ ಸುದ್ದಿ ತಿಳಿದರೆ ಕೂಡಲೇ ನಮಗೆ ತಿಳಿಸುತ್ತಾರೆ. ಶೇಕಡ 40ರಿಂದ 50 ರಷ್ಟು ಸಾವಿನ ಸುದ್ದಿ ತಿಳಿಯುವುದು ನಮ್ಮ ಮಕ್ಕಳಿಂದಲೇ.

ನಾವು ಸ್ಥಳಕ್ಕೆ ಹೋಗಿ ಮನವಿ ಮಾಡುತ್ತೇವೆ. ಕೆಲವರು ಒಪ್ಪುತ್ತಾರೆ ಇನ್ನೂ ಕೆಲವರು 'ಇಲ್ಲ' ಅಂತಾರೆ. ಸರೀನಪ್ಪಾ ನೀವೆ ಇಟ್ಕೊಳ್ಳಿ ಅಂತ ಹೇಳಿ ಬರಿಗೈಲಿ ವಾಪಸ್ಸಾಗುತ್ತೇವೆ. ಎಲ್ಲ ರಾಷ್ಟ್ರೀಯ ಹಬ್ಬಗಳಂದು ಬೇರೆ ಬೇರೆ ಸ್ಥಳಗಳಿಗೆ ಹೋಗಿ ಜಾಗೃತಿ ಮೂಡಿಸುತ್ತೇವೆ. ಅದರ ಜೊತೆಗೆ 'ಮಗ್ಗದೂರಿನ ಕಣ್ಣಪ್ಪಗಳು' ಎಂಬ ಫೇಸ್‌ಬುಕ್ ಪೇಜ್, ವಾಟ್ಸ್ಆ್ಯಪ್ ಗ್ರೂಪ್‌ಗಳಿವೆ. ಅವುಗಳ ಮೂಲಕವೂ ಜಾಗೃತಿ ಮೂಡಿಸುತ್ತೇವೆ. ಎಲ್ಲೆಡೆ ನಮ್ಮ ತಂಡದ ಮೊಬೈಲ್ ಸಂಖ್ಯೆಯನ್ನು ಹಂಚಿಕೊಂಡಿದ್ದೇವೆ.

ದೊಡ್ಡಬಳ್ಳಾಪುರ ಭಾಗದಲ್ಲಿ ಸಾವಿನ ಸುದ್ದಿ ತಿಳಿದ ಕೂಡಲೇ ಮೃತರ ಮನೆಗೆ ಹೋಗಿ, ನೇತ್ರದಾನಕ್ಕೆ ಅಂಗಲಾಚುತ್ತೇವೆ. 93 ಸಾವಿರ ಜನಸಂಖ್ಯೆಯುಳ್ಳ ದೊಡ್ಡಬಳ್ಳಾಪುರದಲ್ಲಿ ಶೇ. 10ರಷ್ಟು ಮಂದಿಗೆ ನೇತ್ರದಾನದ ಅರಿವಿದೆ, ದಾನ ಮಾಡುತ್ತಿದ್ದಾರೆ. ಆದರೆ, ಬೆಂಗಳೂರಿನಂತಹ ಮಹಾನಗರದಲ್ಲಿ ಆಗುತ್ತಿರುವುದು ಶೇ. 1ರಷ್ಟು ದಾನವಷ್ಟೇ. ಮಹಾನಗರಕ್ಕೆ ಹೋಲಿಕೆ ಮಾಡಿದರೆ ದೊಡ್ಡಬಳ್ಳಾಪುರದ ನಮ್ಮ ಸಾಧನೆ ದೊಡ್ಡದು.

ಅಭಿಷೇಕ್ ನೇತ್ರಧಾಮದ ವತಿಯಿಂದ ಇದುವರೆಗೂ 1,340 ಕಣ್ಣುಗಳನ್ನು ಸಂಗ್ರಹಿಸಿದ್ದೇವೆ. ಈ ವರ್ಷ 240 ಕಣ್ಣುಗಳನ್ನು ಸಂಗ್ರಹಿಸಿದ್ದೇವೆ. ಪ್ರಾರಂಭದಲ್ಲಿ ವಾರ್ಷಿಕ 20 ಕಣ್ಣುಗಳಷ್ಟೇ ದಾನವಾಗಿ ಸಿಗುತ್ತಿದ್ದವು. ಆದಾದ ಬಳಿಕ ಪ್ರತಿವರ್ಷವೂ ಹೆಚ್ಚಾಗತೊಡಗಿತು.

## ಮನವಿ ವೇಳೆ ಆದ ಅನುಭವ

ದೊಡ್ಡಬಳ್ಳಾಪುರದಲ್ಲಿ ವೈದ್ಯರ ಸಂಬಂಧಿಯೊಬ್ಬರು ಮೃತಪಟ್ಟಿದ್ದರು. ಕಣ್ಣು ದಾನಕ್ಕೆಂದು ನಾವು ಅವರನ್ನು ಮನವಿ ಮಾಡಿದೆವು. ಆಗ ಅವರು, 'ಸರ್ ನೇತ್ರದಾನ ಮಾಡಲು ಆಗಲ್ಲ. ನಮ್ಮಪ್ಪ ತುಂಬಾ ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಸ್ವರ್ಗಕ್ಕೆ ಹೋಗುವುದು ಗ್ಯಾರಂಟಿ. ಸ್ವರ್ಗಕ್ಕೆ ಹೋದಾಗ ಅಲ್ಲಿನ ಸೌಂದರ್ಯ ನೋಡಲು ಅವರಿಗೆ ಕಣ್ಣು ಬೇಡವೇ' ಎಂದು ಹೇಳಿದರು.

ಎಂಜಿನಿಯರ್ ಒಬ್ಬರ ತಾಯಿ ತೀರಿ ಹೋದರು. ಅವರಿಗೂ ಮನವಿ ಮಾಡಿದೆವು. 'ಇಲ್ಲ ಸರ್, ನಮ್ಮ ತಾಯಿ ಪ್ರತಿದಿನ ಅಶ್ವತ್ಥಕಟ್ಟೆಗೆ 108 ಪ್ರದಕ್ಷಿಣೆ ಹಾಕುತ್ತಿದ್ದರು. ಅವರೀಗ ನಿಜವಾಗಿಯೂ ಬೇರೊಂದು ಲೋಕಕ್ಕೆ ಹೋಗುತ್ತಾರೆ. ಆಗ ಅವರಿಗೆ ಕಣ್ಣಿನ ಅಗತ್ಯವಿದೆ. ಅವರು ಹೇಗಿದ್ದಾರೋ ಹಾಗೆಯೇ ಹೋಗಲಿ. ಯಾವುದನ್ನೂ ಭಿನ್ನ ಮಾಡಲ್ಲ ನಾವು' ಎಂದರು.

ನಮ್ಮ ಶಾಲೆಯಲ್ಲಿ ಓದುತ್ತಿದ್ದ 9 ವರ್ಷದ ಬಾಲಕನೊಬ್ಬ ಮೇಳೆಕೋಟೆಯಲ್ಲಿ ಕೃಷಿಹೊಂಡಕ್ಕೆ ಬಿದ್ದು ಮೃತಪಟ್ಟಿದ್ದ. ಕೃಷಿ ಹೊಂಡದಿಂದ ಮೇಲೆತ್ತಿದ ಕೂಡಲೇ ಬಾಲಕನ ಸಂಬಂಧಿಕರು ಕರೆ ಮಾಡಿ ನೇತ್ರದಾನಕ್ಕೆ ಮನವಿ ಮಾಡಿದರು. ಆ ಘಟನೆಯನ್ನು ನೆನೆಸಿಕೊಂಡರೆ ಈಗಲೂ ನನ್ನ ಕಣ್ಣಲ್ಲಿ ನೀರು ಬರುತ್ತದೆ. ಅವನ ಕಣ್ಣುಗಳು 'ಎ' ಗ್ರೇಡ್ ಬಂದವು. ಅವುಗಳನ್ನು ನಾಲ್ಕು ಮಕ್ಕಳಿಗೆ ಕಸಿ ಮಾಡಿ ದೃಷ್ಟಿ ನೀಡಲಾಯಿತು.

**-ಎಂ.ಬಿ ಗುರುದೇವ,** ಕಾರ್ಯದರ್ಶಿ, ಸ್ವಾಮಿ ವಿವೇಕಾನಂದ ಶಾಲೆ, ದೊಡ್ಡಬಳ್ಳಾಪುರ

ಮಾಡುವ ಶಸ್ತ್ರಚಿಕಿತ್ಸೆಗೆ ಮಾತ್ರ ಆಸ್ಪತ್ರೆಗಳಲ್ಲಿ ಶುಲ್ಕ ಭರಿಸಬೇಕಾಗುತ್ತದೆ.

- ನೇತ್ರದಾನ ಮಾಡಬೇಕೆಂಬ ಆಸೆಯಿಂದ ಅನೇಕರು ಹೆಸರು ನೋಂದಾಯಿಸಿಕೊಳ್ಳುತ್ತಾರೆ. ಆದರೆ, ಆ ಬಗ್ಗೆ ತನ್ನ ಸುತ್ತಮುತ್ತಲಿನವರಿಗೆ ಹಾಗೂ ಸಂಬಂಧಿಕರಿಗೆ ಹೇಳಿರುವುದಿಲ್ಲ. ಹೇಳಿದ್ದರೂ ಅವರು ಬೇರೆ ಬೇರೆ ಕಾರಣಗಳಿಂದ ಮರೆತುಬಿಡುತ್ತಾರೆ. ಹೀಗಾಗಿ, ಹೆಸರು ನೋಂದಾಯಿಸಿಕೊಂಡವರೂ ಕಣ್ಣು ದಾನ ಮಾಡಲು ಸಾಧ್ಯವಾಗದಿರುವ ಉದಾಹರಣೆಗಳೂ ಸಾಕಷ್ಟಿವೆ.
- ಸದ್ಯಕ್ಕಂತೂ ನೇತ್ರದಾನಕ್ಕೆ ಬೆಂಗಳೂರೇ ಕೇಂದ್ರಸ್ಥಳ. ಕೆಲವು ನೇತ್ರದಾನ ಕೇಂದ್ರಗಳಂತೂ ತಮ್ಮ ಚಟುವಟಿಕೆಗಳನ್ನು ಬೆಂಗಳೂರಿಗೆ ಮಾತ್ರ ಸೀಮಿತಗೊಳಿಸಿವೆ. ಇದೂ ಸಹ ನೇತ್ರದಾನಿಗಳ ಸಂಖ್ಯೆ ಹೆಚ್ಚಾಗದಿರಲು ಮುಖ್ಯ ಕಾರಣವಾಗಿದೆ. ಡಾ.ರಾಜ್‌ಕುಮಾರ್ ನೇತ್ರದಾನ ಕೇಂದ್ರ, ಲಯನ್ಸ್ ಇಂಟರ್‌ನ್ಯಾಷನಲ್ ಐ ಬ್ಯಾಂಕ್ ಮತ್ತಿತರ ಕೇಂದ್ರಗಳು ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಹೆಚ್ಚು ಸಕ್ರಿಯವಾಗಿವೆ. ನೇತ್ರದಾನ ಕೇಂದ್ರಗಳು ತಾಲ್ಲೂಕು ಮಟ್ಟದಲ್ಲಿ ವಿಸ್ತಾರಗೊಳ್ಳದ ಹೊರತು ಕಣ್ಣಿನ ದಾನಿಗಳ ಸಂಖ್ಯೆ ಹೆಚ್ಚಾಗದು.

## ಸರ್ಕಾರದ ಜವಾಬ್ದಾರಿ ದೊಡ್ಡದು

ನೇತ್ರದಾನದ ಬಗ್ಗೆ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯಾದರೂ, ಆ ಚಟುವಟಿಕೆಗಳು ತೀರಾ ಕಡಿಮೆ. ಬೆಂಗಳೂರು ಮೆಡಿಕಲ್ ಕಾಲೇಜು ಆ್ಯಂಡ್ ರಿಸರ್ಚ್ ಸೆಂಟರ್, ಮೈಸೂರು ಮೆಡಿಕಲ್ ಕಾಲೇಜು, ಕಿಮ್ಸ್ ಹುಬ್ಬಳ್ಳಿ, ಬಳ್ಳಾರಿ ಮೆಡಿಕಲ್ ಕಾಲೇಜು ಹಾಗೂ ಈಗ ಹೊಸದಾಗಿ ತುಮಕೂರು ಮೆಡಿಕಲ್ ಕಾಲೇಜುಗಳನ್ನು ಹೊರತುಪಡಿಸಿದರೆ ಸರ್ಕಾರದ ಉಳಿದ ಯಾವುದೇ ಮೆಡಿಕಲ್ ಕಾಲೇಜುಗಳಲ್ಲಿ ಕಣ್ಣಿನ ಕಸಿ ಸೌಲಭ್ಯವಿಲ್ಲ.

ಕಣ್ಣಿನ ಸಂಗ್ರಹ ಕಾರ್ಯವು ಸರ್ಕಾರದ ವತಿಯಿಂದ ಆಗುತ್ತಿರುವುದು ಕೇವಲ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ. ಅದು ತಾಲ್ಲೂಕು ಮಟ್ಟಕ್ಕೆ ಇನ್ನೂ ಇಳಿದಿಲ್ಲ. ಬಹುತೇಕ ಜಿಲ್ಲಾಕೇಂದ್ರಗಳಲ್ಲಿ ಸಂಗ್ರಹವಾದ ಕಣ್ಣುಗಳು ಕೂಡಲೇ ಮಿಂಟೊ ಆಸ್ಪತ್ರೆಗೆ ರವಾನೆಯಾಗುತ್ತವೆ. ಕೆಲವು ಜಿಲ್ಲೆಗಳಿಂದ ವೈದ್ಯಕೀಯ ಕಾಲೇಜುಗಳಿಗೆ ರವಾನೆಯಾಗುತ್ತವೆ.

ಬೆಂಗಳೂರಿನ ಮಿಂಟೊ ಕಣ್ಣಿನ ಆಸ್ಪತ್ರೆಯಿಂದ ವರ್ಷಕ್ಕೊಮ್ಮೆ ಆಗಸ್ಟ್ 24ರಿಂದ ಸೆಪ್ಟೆಂಬರ್ 8ರವರೆಗೆ 'ಕಾರ್ನಿಯಲ್ ಐ ಡೊನೇಷನ್ ಪಾಕ್ಷಿಕ' ಅಭಿಯಾನ ಮಾಡಲಾಗುತ್ತದೆ. ಅಕ್ಟೋಬರ್ ತಿಂಗಳ ಎರಡನೇ ಬುಧವಾರದ 'ವಿಶ್ವ ದೃಷ್ಟಿ ದಿನಾಚರಣೆ'ಯಂದು ವಾಕಾಥಾನ್, ಕಣ್ಣಿನ ಶಿಬಿರ ಆಯೋಜನೆ ನಡೆಯುತ್ತವೆ.

ಈಚಿನ ದಿನಗಳಲ್ಲಿ ಜಿಲ್ಲೆಗೊಬ್ಬರಂತೆ ಕಣ್ಣಿನ ತಜ್ಞರನ್ನು ಸರ್ಕಾರ ನೇಮಿಸಿದೆ. ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವುದರ ಜೊತೆಗೆ, ನೇತ್ರದಾನ ಜನಪ್ರಿಯಗೊಳಿಸುವ ಜವಾಬ್ದಾರಿಯೂ ಅವರ ಮೇಲಿದೆ. ಆದರೆ, ಎಷ್ಟೋ ಕಡೆಗಳಲ್ಲಿ ಕಣ್ಣುಗಳ ಸಂಗ್ರಹಕ್ಕೆ ಅಗತ್ಯವಾದ ವಿಶೇಷ ಸೌಲಭ್ಯಗಳೇ ಇಲ್ಲ. ಸಾಗಬೇಕಾದ ದಾರಿ ಸಾಕಷ್ಟು ದೂರವಿದೆ. ಈಗಷ್ಟೇ ಆ ದಾರಿಯನ್ನು ನಿರ್ಮಿಸುವ ಪ್ರಯತ್ನ ನಡೆದಿದೆ.

ಸರ್ಕಾರ ಮತ್ತು ಸಂಘ ಸಂಸ್ಥೆಗಳ ಪಾತ್ರವೇನೇ ಇರಲಿ, ನೇತ್ರದಾನದ ಅರಿವು ಮೂಡಿಸುವ ಕೆಲಸ ವೈಯಕ್ತಿಕ ನೆಲೆಯಲ್ಲಿ ನಡೆಯಬೇಕಾಗಿದೆ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಶಾಲಾಮಕ್ಕಳಿಗೂ ಕಣ್ಣನ್ನು ದಾನ ಮಾಡುವ ಅಗತ್ಯದ ಕುರಿತು ತಿಳಿವಳಿಕೆ ನೀಡಬೇಕಾಗಿದೆ. ಹಣತೆ ಹಚ್ಚುವ ಕೆಲಸ ಬೇರೆ ಬೇರೆ ನೆಲೆಗಳಲ್ಲಿ, ರೂಪಗಳಲ್ಲಿ ನಡೆದಾಗಷ್ಟೇ ಅಂಧತ್ವ ನಿವಾರಣೆಯ ಆಂದೋಲನ ಯಶಸ್ವಿಯಾಗಲು ಸಾಧ್ಯ.

ಕವಿ ಜಿ.ಎಸ್. ಶಿವರುದ್ರಪ್ಪನವರು ಹಣತೆ ಹಚ್ಚುವುದರ ಮಹತ್ವವನ್ನು ತಮ್ಮ 'ನನ್ನ ಹಣತೆ' ಕವಿತೆಯಲ್ಲಿ ಬಣ್ಣಿಸಿರುವುದು ಹೀಗೆ:

ಹಣತೆ ಹಚ್ಚುತ್ತೇನೆ ನಾನೂ,
ಈ ಕತ್ತಲನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ;
ಲೆಕ್ಕವೇ ಇರದ ದೀಪಾವಳಿಯ ಹಡಗುಗಳೆ
ಇದರಲ್ಲಿ ಮುಳುಗಿ ಕರಗಿರುವಾಗ
ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ,

'ಕತ್ತಲೆಗೆ ಕೊನೆಯಿರದ ಬಾಯಾರಿಕೆ' ಎನ್ನುವ ಸತ್ಯವನ್ನು ತಿಳಿದೂ ನಾವೆಲ್ಲರೂ ಹಣತೆ ಹಚ್ಚುವ ಕೆಲಸ ಮಾಡಬೇಕಾಗಿದೆ. ಏಕೆಂದರೆ, ಹಣತೆ ಹಚ್ಚುವುದೆಂದರೆ ನಮ್ಮ ಬದುಕನ್ನು ಬೆಳಕಾಗಿಸಿಕೊಳ್ಳುವುದು ಹಾಗೂ ಸುತ್ತಮುತ್ತಲ ಪರಿಸರವನ್ನೂ ಬೆಳಕಾಗಿಸುವುದು. ಈ ಹಣತೆಯ ರೂಪಕ 'ನೇತ್ರದಾನ'ದ ರೂಪದಲ್ಲಿ ನಮ್ಮೆಲ್ಲರಿಗೂ ಒದಗಿಬರಲಿ; ಅದಕ್ಕೆ ಈ ದೀಪಾವಳಿ ನೆಪವಾಗಲಿ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in